# ದ್ವಿಭಾಷಾ ಮಾಧ್ಯಮ ವಿಭಾಗದ ತರಗತಿಗಳಿಗೆ ಪರ್ಯಾಯ ಶೈಕ್ಷಣಿಕ ಯೋಜನೆ – 2021-22

**ತರಗತಿ -3 ಸೇತುಬಂಧ ಕಾರ್ಯಯೋಜನೆ ವಿಷಯ : ಕನ್ನಡ**

**(ಜುಲೈ 1 ರಿಂದ ವಾರಕ್ಕೆ 6 ಅವಧಿಗಳಂತೆ ಒಟ್ಟು 45 ಅವಧಿಗಳು)**

| ದಿನ | ಕಲಿಕಾಂಶಗಳು | ಪರ್ಯಾಯ ಬೋಧನಾ / ಕಲಿಕಾ ತಂತ್ರಗಳು | ಇಲಾಖೆಯಿಂದ ಈ ಕುರಿತು ಲಭ್ಯವಿರುವ / ತಯಾರಿಸಬೇಕಾದ ಸಂಪನ್ಮೂಲಗಳು | ಮೌಲ್ಯಮಾಪನ ತಂತ್ರಗಳು ಮತ್ತು ದಾಖಲೆಗಳು |
|---|---|---|---|---|
| **1ನೇ ದಿನ** | ಆಲಿಸಿದ ವಿಷಯ ವಸ್ತುಗಳ ಕುರಿತು ತನ್ನದೇ ಆದ ಪದಗಳಲ್ಲಿ ಅಭಿಪ್ರಾಯ ವ್ಯಕ್ತಪಡಿಸುತ್ತಾನೆ. | • ಪೂರ್ವಭಾವಿ ಚಟುವಟಿಕೆ -'ಆನೆಬಂದಿತ್ತು' ಪದ್ಯ<br>• ಈ ಪದ್ಯದ ಆಡಿಯೋ ಲಿಂಕ ಹಾಗೂ ಮುದ್ರಿತ ರೂಪದಲ್ಲೂ ನೀಡುವುದು.<br>ಮಾರ್ಗದರ್ಶಕರು / ಮಾರ್ಗದರ್ಶಕರು ಪದ್ಯವನ್ನು ಹಾಡುವುದು / ಲಿಂಕ್ ಮೂಲಕ ನೀಡಿದ ಆಡಿಯೋ ಕೇಳಿಸಿ ಹಾಡಿಸುವುದು. | ಪಠ್ಯಪುಸ್ತಕ (ಬುಕ್ ಬ್ಯಾಂಕ್)<br><br>https://youtu.be/xu4PpPof_Rg | ಮಕ್ಕಳು ಪದ್ಯವನ್ನು ಆಲಿಸಿ ಶಿಕ್ಷಕರೊಂದಿಗೆ ಹಾಡುವರು. |
| **2ನೇ ದಿನ** | “ | • ಬಣ್ಣದಹಕ್ಕಿ ಪದ್ಯವನ್ನು ಕೇಳಿಸಿ ಹಾಡಲು ಅಭ್ಯಾಸ ಮಾಡಿಸುವುದು.<br>ಆಡಿಯೋ ಲಿಂಕ್ ಬಳಸಿ ಮಕ್ಕಳು ಅದರೊಂದಿಗೆ ಹಾಗೂ ಸ್ವತಂತ್ರವಾಗಿ ಹಾಡಲು ಸಹಾಯ ಮಾಡುವುದು. | https://youtu.be/dq9Sed5MV-8<br>( ಬಣ್ಣದಹಕ್ಕಿ ಪದ್ಯದ ವೀಡಿಯೋ ಲಿಂಕ್)<br>ಪಠ್ಯಪುಸ್ತಕ | ಪದ್ಯವನ್ನು ಆಲಿಸಿ ಸ್ವತಂತ್ರವಾಗಿ ಹಾಡುವರು |
| **3ನೇ ದಿನ** | “ | • ಹಕ್ಕಿಯ ಚಿತ್ರಕ್ಕೆ ಬಣ್ಣ ತುಂಬಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವರು | ಹಕ್ಕಿಯ ಚಿತ್ರದ ಹಾಳೆ<br>WORK SHEET 1 | ಹಕ್ಕಿಯ ಚಿತ್ರಕ್ಕೆ ಬಣ್ಣ ಹಾಕುವರು, ಹಕ್ಕಿಯ ಕುರಿತು ತಮ್ಮ ಮಾತುಗಳಲ್ಲಿ ಅಭಿಪ್ರಾಯ ಹಂಚಿಕೊಳ್ಳುವರು |
| **4ನೇ ದಿನ** | ಚಿತ್ರಗಳನ್ನು ಅನುಕ್ರಮವಾಗಿ ಜೋಡಿಸಿ, ಅವಲೋಕಿಸಿ ಕಥೆ ನಿರೂಪಣೆ | • ಕುದುರೆ, ಆನೆ, ಒಂಟೆ ಚಿತ್ರಗಳನ್ನು ಬಳಸಿ ಕಥೆ ಹೇಳುವುದು,<br>ಹೇಳಿದ ಕಥೆಯ ವೀಡಿಯೋ ಲಿಂಕ್ ಬಳಸಿ ಕಥೆಯನ್ನು ಕೇಳಿಸುವುದು. ವೀಡಿಯೋ ಲಭ್ಯವಿಲ್ಲದಿದ್ದಲ್ಲಿ ಚಿತ್ರಸಹಿತ | ಪಠ್ಯಪುಸ್ತಕ<br>ಚಿತ್ರಕಥೆಯ ಹಾಳೆ<br>(ಗೆಳೆತನ ಕಥೆಯ ವೀಡಿಯೋ | ಕಥೆಯನ್ನು ಆಲಿಸಿ ಅಲ್ಲಿ ಬರುವ ಪಾತ್ರಗಳನ್ನು ಗುರುತಿಸುವರು, ಕಥೆಗೆ ಸಂಬಂಧಿಸಿದ ಸರಳ |

| | | | | |
|---|---|---|---|---|
| | ಮಾಡುವವರು ಮತ್ತು ಮೆಚ್ಚಿಕೊಳ್ಳುವವರು | ಕಥೆಯ ಮುದ್ರಿತ ಹಾಳೆಯನ್ನು / ಪಠ್ಯಪುಸ್ತಕವನ್ನು ಬಳಸಿ ಕಥೆ ಹೇಳುವುದು. | ಲಿಂಕ್) https://youtu.be/zhlcn-Ai4ms | ಪ್ರಶ್ನೆಗಳಿಗೆ ಉತ್ತರಿಸುವವರು |
| **5ನೇ ದಿನ** | " | ಚಿತ್ರ ಬಳಸಿ ಮಕ್ಕಳು ಕಥೆ ಹೇಳಲು ಪ್ರೇರೇಪಿಸುವುದು | ಪಠ್ಯಪುಸ್ತಕ<br>WORK SHEET 2 & 3 | ಚಿತ್ರದ ಸಹಾಯದಿಂದ ಕಥೆಯನ್ನು ಹೇಳುವರು. |
| **6ನೇ ದಿನ** | " | ಸ್ವತಂತ್ರವಾಗಿಕಥೆಯನ್ನುಹೇಳಲುಪ್ರೇರೇಪಿಸುವುದು | | ಸ್ವತಂತ್ರವಾಗಿ ಕಥೆಯನ್ನು ಹೇಳುವರು |
| **7ನೇ ದಿನ** | ವಿವಿಧ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಶಾಲಾಭಾಷೆ ಬಳಸಿ ವ್ಯವಹರಿಸುವವರು | ಶಾಲಾ ಭಾಷೆಯನ್ನು ಬಳಸಿ ಮಾತನಾಡುವ ಕೌಶಲ ಬೆಳೆಸಲು ಮಾರ್ಗದರ್ಶಕರು ಈ ಕೆಳಕಂಡ ಚಟುವಟಿಕೆಯನ್ನುನೀಡುವುದು,<br>ಶಾಲೆ, ಆಸ್ಪತ್ರೆ, ಜಾತ್ರೆ, ಸನ್ನಿವೇಶಗಳನ್ನು ಸೃಷ್ಟಿಸಿ ಪಾತ್ರಗಳನ್ನು ಗುರುತಿಸಿ ಮಾತನಾಡಲು ಹೇಳುವುದು.<br>ಉದಾ: ವೈದ್ಯ ಮತ್ತು ರೋಗಿಯ ಸಂಭಾಷಣೆ | ಮಾರ್ಗದರ್ಶಕರು ಸನ್ನಿವೇಶಕ್ಕೆ ತಕ್ಕಂತೆ ಮುದ್ರಿತ ಸಂಭಾಷಣಾ ಕಾರ್ಡಗಳನ್ನು ಸಿದ್ದಪಡಿಸಿ ಮಕ್ಕಳಿಗೆ ಅಭ್ಯಾಸ ಮಾಡಿಸುವುದು.<br>WORK SHEET 4 | ಶಾಲಾಭಾಷೆ (ಔಪಚಾರಿಕ) ಯನ್ನು ಬಳಸಿ ಮಾತನಾಡುವರು |
| **8ನೇ ದಿನ** | " | ಹಿಂದಿನ ದಿನದ ಕಲಿಕೆಯನ್ನು ಆಧರಿಸಿ ಮಕ್ಕಳು ಶಾಲಾ ಸನ್ನಿವೇಶದಲ್ಲಿ ಔಪಚಾರಿಕ ಭಾಷೆಯನ್ನು ಬಳಸಿ ಮಾತನಾಡಲು ಪ್ರೇರೇಪಿಸುವುದು.<br>ಉದಾ: ಶೌಚಾಲಯಕ್ಕೆ ತೆರಳಲು ಶಿಕ್ಷಕರ ಅನುಮತಿ ಕೇಳುವುದು, ಲೆಕ್ಕ ಬಿಡಿಸಲು ಶಿಕ್ಷಕರ ಸಹಾಯ ಕೇಳುವುದು | -\|\|- | ಮಕ್ಕಳುಔಪಚಾರಿಕಭಾಷೆ ಯನ್ನುತಮ್ಮಉದ್ದೇಶಈ ಡೇರಿಸಿಕೊಳ್ಳಲುಬಳಸುವ ರು. |
| **9ನೇ ದಿನ** | ಪರಿಚಿತ ಹಾಗೂ ಅಪರಿಚಿತ ಬರಹಗಳಲ್ಲಿ ಆಸಕ್ತಿ ತೋರಿ ಶಬ್ದ ಗಳನ್ನು ಗುರುತಿಸುವರು, ತಮ್ಮ ಪೂರ್ವಾನುಭವ ಮತ್ತು ನೆನಪಿನ ಸಹಾಯದಿಂದ ಅರ್ಥಊಹಿಸುವರು. | ಮಾರ್ಗದರ್ಶಕರು ಮಕ್ಕಳಿಗೆ ಪರಿಚಿತ ಹಾಗೂ ಅಪರಿಚಿತ ಪದಗಳನ್ನು ಗುರುತಿಸಲು ಸಹಾಯ ಮಾಡಲು ಪಠ್ಯದಿಂದ ಆಯ್ದ ವಾಕ್ಯಪುಂಜಗಳನ್ನು ನೀಡುವುದು.<br>• ಮಕ್ಕಳು ಮಾರ್ಗದರ್ಶಕರು ಓದುವುದನ್ನು ಆಲಿಸಿ ಅದರಲ್ಲಿ ಬರುವ ಪರಿಚಿತ ಹಾಗೂ ಅಪರಿಚಿತ ಪದಗಳನ್ನು ಗುರುತಿಸುವರು.<br>• ಮಾರ್ಗದರ್ಶಕರು ಅಪರಿಚಿತ ಪದಗಳ ಅರ್ಥವನ್ನು ತಿಳಿಯಲು ಮಕ್ಕಳಿಗೆ ಸಹಾಯ ಮಾಡುವುದು. | ಪಠ್ಯ ಪುಸ್ತಕ<br>ವಾಕ್ಯ ಪುಂಜಗಳ ಹಾಳೆಗಳು<br>WORKSHEET - 5 | ಅಪರಿಚಿತ ಪದಗಳನ್ನು ಗುರುತಿಸಿ ಶಿಕ್ಷಕರ ಸಹಾಯದಿಂದ ಅವುಗಳ ಅರ್ಥ ಊಹಿಸುವರು. |
| **10ನೇ ದಿನ** | | • ಮಾರ್ಗದರ್ಶಕರು ಪಠ್ಯದಿಂದ ಆಯ್ದ ಸರಳ ವಾಕ್ಯ ಪುಂಜಗಳನ್ನು (ಪ್ಯಾರಾಗ್ರಾಫ್) ನೀಡಿ | ಪಠ್ಯಪುಸ್ತಕ<br>WORK SHEET 6 | ಅಪರಿಚಿತ ಪದಗಳ ಪಟ್ಟಿ ಮಾಡುವರು ಹಾಗೂ |

| | | | | |
|---|---|---|---|---|
| | " | ಮಕ್ಕಳು ತಮಗೆ ಗೊತ್ತಿರುವ ಹಾಗೂ ಗೊತ್ತಿರದ ಪದಗಳ ಪಟ್ಟಿ ಮಾಡಲು ತಿಳಿಸುವುದು.<br>• ಮಕ್ಕಳು ಪದಗಳನ್ನು ಗುರುತಿಸಿದ ನಂತರ ಸನ್ನಿವೇಶಗಳ ಮೂಲಕ ಅವುಗಳ ಅರ್ಥವನ್ನು ಊಹಿಸಲು ಹೇಳುವುದು | | ಅವುಗಳ ಅರ್ಥ ಊಹಿಸುವರು. |
| **11ನೇ ದಿನ** | " | • ಮಕ್ಕಳು ಸ್ವತಂತ್ರವಾಗಿ ಪಠ್ಯದಲ್ಲಿರುವ ವಾಕ್ಯಪುಂಜವನ್ನು ಆಯ್ಕೆ ಮಾಡಿಕೊಂಡು ಪರಿಚಿತ ಹಾಗೂ ಅಪರಿಚಿತ ಪದಗಳನ್ನು ಗುರುತಿಸುವರು.<br>• ಗುರುತಿಸಿದ ಪದಗಳನ್ನು ತಮ್ಮ ಪೂರ್ವ ಅನುಭವದ ಮೂಲಕ ತಮ್ಮದೇ ಸಂದರ್ಭಗಳಲ್ಲಿ ಬಳಸಿ ಹೇಳುವರು.<br>• ಮಾರ್ಗದರ್ಶಕರು ಮಕ್ಕಳು ವಾಕ್ಯಪುಂಜಗಳನ್ನು ಆಯ್ಕೆ ಮಾಡಿಕೊಂಡು ಓದಲು ಸಹಾಯ ಮಾಡುವುದು. | ಪಠ್ಯಪುಸ್ತಕ<br>WORK SHEET 7 | ಪದಗಳನ್ನು ಗುರುತಿಸಿ ಸಂದರ್ಭಗಳಲ್ಲಿ ಬಳಕೆ ಮಾಡುವರು. |
| **12ನೇ ದಿನ** | ಚಿತ್ರದಲ್ಲಿ ಇರುವ ಪದಗಳನ್ನು ಗುರುತಿಸಿ ಅದರಲ್ಲಿರುವ ಅಕ್ಷರ ಮತ್ತು ಪದಗಳು ಎಷ್ಟಿವೆ ಎಂದು ಹೇಳುವರು. | • ಮಾರ್ಗದರ್ಶಕರು ಚಿತ್ರಸಹಿತ ಪದ, ವಾಕ್ಯಗಳಿರುವ ಕಾರ್ಡಗಳನ್ನು ನೀಡಿ ಅದರಲ್ಲಿರುವ ಅಕ್ಷರ ಹಾಗೂ ಪದಗಳನ್ನು ಗುರುತಿಸಲು (ಓದಲು) ಹೇಳುವುದು.<br>ಉದಾ: ಕುದುರೆ ಚಿತ್ರ<br>ಪದ –ಕುದುರೆ<br>ವಾಕ್ಯ- ಕುದುರೆ ಓಡುತ್ತದೆ. | ಚಿತ್ರಸಹಿತ ಪದ, ವಾಕ್ಯಗಳ ಕಾರ್ಡಗಳು<br>WORK SHEET 8 | ಚಿತ್ರ ನೋಡಿ ಪದ, ವಾಕ್ಯವನ್ನು ಗುರುತಿಸಿ ಓದುವರು |
| **13ನೇ ದಿನ** | ತಮ್ಮ ಕಲ್ಪನಾ ಶಕ್ತಿಯಿಂದ ಚಿತ್ರಗಳಲ್ಲಿರುವ ಸನ್ನಿವೇಶಗಳ ಬಗ್ಗೆ ಅವಲೋಕನ ಮಾಡುತ್ತಾರೆ, ಗ್ರಹಿಸುತ್ತಾರೆ ಹಾಗೂ ಮೆಚ್ಚಿಕೊಳ್ಳುತ್ತಾರೆ. | • ಮಾರ್ಗದರ್ಶಕರು ವಿವಿದ ಸನ್ನಿವೇಶಗಳ ಚಿತ್ರಗಳನ್ನು ನೀಡಿ ಮಕ್ಕಳು ಸೂಕ್ಷ್ಮವಾಗಿ ಗಮನಿಸಲು ಸೂಚಿಸುವುದು.<br>• ಮಾರ್ಗದರ್ಶಕರು ಚಿತ್ರವನ್ನು ಆಧರಿಸಿ ಪ್ರಶ್ನೆಗಳನ್ನು ಕೇಳುವ ಮಕ್ಕಳು ತಮ್ಮ ಕಲ್ಪನಾ ಶಕ್ತಿಯ ಮೂಲಕ ಉತ್ತರಿಸಲು ಸಹಾಯ ಮಾಡುವರು. | ವಿವಿಧ ಸನ್ನಿವೇಶಗಳ ಚಿತ್ರಪಟಗಳು<br>(2 ಚಿತ್ರಪಟಗಳನ್ನು ನೀಡಿದ್ದು ದಿನಕ್ಕೆ 1 ಚಿತ್ರ ಪಟ ಬಳಸುವುದು)<br>WORK SHEET 9 | ಚಿತ್ರ / ಸನ್ನಿವೇಶ ಗುರುತಿಸಿ ತಮ್ಮ ಕಲ್ಪನಾಶಕ್ತಿಯನ್ನು ಸಂಯೋಜಿಸಿ ಉತ್ತರಿಸುವರು |

| | | | | |
|---|---|---|---|---|
| **14 & 15ನೇ ದಿನ** | " | • ಚಿತ್ರ/ ಸನ್ನಿವೇಶದ ಕಾರ್ಡನ್ನು ಮಗುವಿಗೆ ನೀಡಿ ತನ್ನ ಕಾಲ್ಪನಿಕ ಅಭಿಪ್ರಾಯವನ್ನು ವ್ಯಕ್ತಪಡಿಸಲು ಸಹಾಯ ಮಾಡುವುದು | ಚಿತ್ರ/ಸನ್ನಿವೇಶ ಕಾರ್ಡ್ WORK SHEET- 10 | ಚಿತ್ರ / ಸನ್ನಿವೇಶದ ಕುರಿತು ಸ್ವಂತ ಕಲ್ಪನೆಯನ್ನು ಸಂಯೋಜಿಸಿಕೊಂಡು ಮಾತನಾಡುವರು. |
| **16ನೇದಿನ** | ಮೌಲ್ಯಮಾಪನ | • ಹಿಂದಿನ 15 ದಿನಗಳ ಕಲಿಕೆಯನ್ನು ಆಧರಿಸಿ ಮೌಖಿಕ/ಲಿಖಿತ ಮೌಲ್ಯಮಾಪನವನ್ನು ಕೈಗೊಳ್ಳುವುದು.<br>• ಮೌಖಿಕ ಉತ್ತರಗಳನ್ನು ಆಡಿಯೋ ದಾಖಲೆಯ ಮೂಲಕ ಸಂಗ್ರಹಿಸುವುದು.<br>• ಲಿಖಿತ ಉತ್ತರಗಳನ್ನು ಕಾರ್ಯ ಹಾಳೆಗಳಲ್ಲಿ ನಿರ್ವಹಿಸಿ ದಾಖಲೆ ಇಡುವುದು. | ಮೌಲ್ಯಮಾಪನ ಪ್ರಶ್ನೆಪತ್ರಿಕೆ (ಮಾರ್ಗದರ್ಶಕರು / ಮಾರ್ಗದರ್ಶಕರು ಮಗುವಿನ ಸಾಮರ್ಥ್ಯ ಆಧರಿಸಿ ಮೌಲ್ಯಮಾಪನ ಚಟುವಟಿಕೆ / ಪ್ರಶ್ನೆಗಳನ್ನು ಮಾರ್ಪಾಡು ಮಾಡಿಕೊಳ್ಳಬಹುದು) | ಮಕ್ಕಳು ಆಲಿಸುವ. ಮಾತನಾಡುವ, ಹಾಗೂ ಅಕ್ಷರ,ಪದಗಳನ್ನು ಗುರುತಿಸುವ / ಓದುವ ಸಾಮರ್ಥ್ಯವನ್ನು ಪ್ರದರ್ಶಿಸುವರು |